# ನಮ್ಮಬಗ್ಗೆ

ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿನ, ಕರ್ನಾಟಕ ವಿಧಾನಮಂಡಲ ಮತ್ತು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ವೃಂದದ ಅಧಿಕಾರಿಮತ್ತು ನೌಕರರುಗಳಿಗೆ ತರಬೇತಿಯನ್ನು ಹಾಗೂ ಕರ್ನಾಟಕ ಸರ್ಕಾರ ಸಚಿವಾಲಯಕ್ಕೆ ಹೊಸದಾಗಿ ನೇರನೇಮಕಾತಿ ಹೊಂದಿದ ಶಾಖಾಧಿಕಾರಿಗಳು, ಸಹಾಯಕರು, ಕಿರಿಯಸಹಾಯಕರು, ಶೀಘ್ರಲಿಪಿಗಾರರು ಹಾಗೂ ಬೆರಳಚ್ಚುಗಾರರುಗಳಿಗೆ ಬುನಾದಿ ತರಬೇತಿಯನ್ನುನೀಡಲಾಗುತ್ತದೆ. ಈ ತರಬೇತಿಗಳು ಭಾರತಸರ್ಕಾರ ಆಯೋಜಿಸಿದ ತರಬೇತಿ ಕೋರ್ಸಗಳಂತೆ ಇರುತ್ತದೆ. ಕ್ಷೇತ್ರಇಲಾಖೆಗಳ ಮೇಲ್ವಿಚಾರಣಾಮಟ್ಟದ ಅಧಿಕಾರಿ/ಸಿಬ್ಬಂದಿಗಳಿಂದ ತರಬೇತಿಯನ್ನು ಜರುಗಿಸಲಾಗುವುದು.

## ಸಚಿವಾಲಯ ತರಬೇತಿ ಸಂಸ್ಥೆ

ಸಂಸ್ಥೆಯು 8ನೇಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರಿನಲ್ಲಿ ಸ್ಥಾಪಿತವಾಗಿದೆ. ಇದು ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿಕಟ್ಟಡದ ತುಂಬಾ ಹತ್ತಿರವಿದೆ. ಬೆಂಗಳೂರು ಕೆಂಪೇಗೌಡ ಬಸ್ ನಿಲ್ದಾಣದಿಂದ ಮತ್ತು ಸಿಟಿ ರೈಲುನಿಲ್ದಾಣದಿಂದ ಕೇವಲ 3 ಕಿ.ಮಿ.ಅಂತರದಲ್ಲಿದೆ. ಸಚಿವಾಲಯ ತರಬೇತಿ ಸಂಸ್ಥೆಯು 1978ರಲ್ಲಿ ಸ್ಥಾಪನೆಯಾಗಿದೆ. ಇದಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡ ವ್ಯವಸ್ಥಾಪಕ ಸಮಿತಿಯನ್ನು ರಚಿಸಲಾಗಿದೆ;

1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ

   ಇಲಾಖೆ(ಆಡಳಿತಸುಧಾರಣೆ)

2. ಪ್ರಧಾನವ್ಯವಸ್ಥಾಪಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.

3. ಸರ್ಕಾರದ ಉಪಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಆಡಳಿತಸುಧಾರಣೆ)

4. ಸರ್ಕಾರದ ಉಪಕಾರ್ಯದರ್ಶಿ, ಆರ್ಥಿಕಇಲಾಖೆ(ಆಯವ್ಯಯಮತ್ತುಸಂಪನ್ಮೂಲ).

5. ನಿರ್ದೇಶಕರು, ಕರ್ನಾಟಕ ಸಚಿವಾಲಯ ತರಬೇತಿ ಸಂಸ್ಥೆ, -ಸದಸ್ಯ ಕಾರ್ಯದರ್ಶಿ.

ಹಾಲಿ ನಿರ್ದೇಶಕರು, ಕರ್ನಾಟಕ ಸಚಿವಾಲಯ ತರಬೇತಿ ಸಂಸ್ಥೆ, ಇವರು ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಸಮಾನರಾಗಿರುತ್ತಾರೆ. ಸರ್ಕಾರದ ಸಚಿವಾಲಯ ಮತ್ತು ಸರ್ಕಾರದ ಇತರೆ ಇಲಾಖೆಯ ಅಧಿಕಾರಿಗಳು ನಿವೃತ್ತ ಅಧಿಕಾರಿಗಳು ಮತ್ತು ಹೊರ ವಿವಿಧಸಂಸ್ಥೆಗಳ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಕ್ರಮಗಳಲ್ಲಿ ಉಪನ್ಯಾಸವನ್ನು ನೀಡಲಾಗುತ್ತಿದೆ.

# ಉದ್ದೇಶಗಳು

1. ಸೇವೆಗೆ ಹೊಸದಾಗಿ ನೇಮಕ ಹೊಂದುವ ಕಿರಿಯ ಸಹಾಯಕರು, ಸಹಾಯಕರು, ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಮತ್ತು ಶಾಖಾಧಿಕಾರಿಗಳಿಗೆ ಪ್ರವೇಶ ತರಬೇತಿಯನ್ನು ಆಯೋಜಿಸಲಾಗುತ್ತಿದೆ.

2.ಕರ್ನಾಟಕ ಸರ್ಕಾರ ಸಚಿವಾಲಯದ ಸರ್ಕಾರದ ಅಪರ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳ ವೃಂದದಿಂದ ಮೊದಲ್ಗೊಂಡು ಕೆಳಗಿನ ಹಂತದ ಗ್ರೂಪ್-ಡಿ ವೃಂದದ ನೌಕರರವರೆಗೆ ಎಲ್ಲಾ ವೃಂದದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೇವಾ ವಿಷಯಗಳಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ.

3. ಭಾರತ ಸರ್ಕಾರದ ತರಬೇತಿ ವಿಭಾಗ, ನವದೆಹಲಿಯಿಂದ ಆಯೋಜಿಸಲಾಗುವ ತರಬೇತಿ ಕಾರ್ಯಶಿಬಿರವನ್ನು ನಡೆಸಲಾಗುತ್ತದೆ.

4. ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್ ಸಚಿವಾಲಯ, ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸೇವಾ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತಿದೆ.

5. ಬೆಂಗಳೂರಿನಲ್ಲಿ ನೆಲೆಸಿರುವ ಕ್ಷೇತ್ರ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೂ ಸಹ ಸೇವಾ ವಿಷಯಗಳಲ್ಲಿ ತರಬೇತಿ ಕಾರ್ಯಶಿಬಿರವನ್ನು ಆಯೋಜಿಸಲಾಗುತ್ತದೆ.

6. ರಾಜ್ಯದ ಆಡಳಿತದಲ್ಲಿ ಗುಣಮಟ್ಟವನ್ನು ಹೆಚ್ಚಿಸುವ ರಾಜ್ಯ ಸರ್ಕಾರದ ಉದ್ದೇಶವನ್ನು ಸಫಲಗೊಳಿಸಲು ತರಬೇತಿಸಂಸ್ಥೆಯು ಶ್ರಮಿಸುತ್ತಿದ್ದು, ಕರ್ನಾಟಕ ಸರ್ಕಾರ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸ್ವಭಾವದಲ್ಲಿ ಬದಲಾವಣೆ ತರುವ ಉದ್ದೇಶದಿಂದ ವ್ಯಕ್ತಿತ್ವ ವಿಕಸನ, ಕಾರ್ಯದಕ್ಷತೆ ಹೆಚ್ಚಿಸಲು ಮತ್ತು ವರ್ತನೆಯಲ್ಲಿ ಬದಲಾವಣೆ ತರಲು ಪ್ರಯತ್ನಿಸಲಾಗುತ್ತಿದೆ.

# ಕರ್ನಾಟಕಸರ್ಕಾರಸಚಿವಾಲಯತರಬೇತಿಸಂಸ್ಥೆಯಸಿಬ್ಬಂದಿವಿವರ

| | ಮಂಜೂರಾದಹುದ್ದೆಗಳು | | ಹೆಸರುಮತ್ತುಹುದ್ದೆ<br><br>ಶ್ರೀ /ಶ್ರೀಮತಿ | ಮೊಬೈಲ್ಸಂಖ್ಯೆ | ದೂರವಾಣಿಸಂಖ್ಯೆ | ಇ-ಮೇಲ್ |
|---|---|---|---|---|---|---|
| 1 | ನಿರ್ದೇಶಕರು | 1 | ಶ್ರೀಅಶೋಕಡಿಬಾಗೋಜಿಕೊಪ್ಪ | 94496 61960 | 22861788<br>22033215 | kgsti2010@gmail.com |
| 2 | ಉಪನಿರ್ದೇಶಕರು (ಆಡಳಿತ) | 1 | ಶ್ರೀಪಿ.ಎನ್.ಕೃಷ್ಣಮೂರ್ತಿ | 9483425046 | 22867188<br>22033218 | kgsti2010@gmail.com |
| 3 | ಉಪನಿರ್ದೇಶಕರು (ತರಬೇತಿ) | 1 | ಶ್ರೀಉಮ್ಮೇಕೌಸರ್ | 9148860130 | 22867188<br>22033218 | kgsti2010@gmail.com |
| 4 | ಹಿರಿಯಸಹಾಯಕರು | 1 | ಶ್ರೀರವೀಂದ್ರಎಂ | 97415 73797 | | |
| 5 | ಶೀಘ್ರಲಿಪಿಗಾರರು | 1 | ಕು. ಶ್ವೇತಾಎಸ್ | 9738707253 | | |
| 6 | ASSISTANT | 1 | ಭರತ್ವುಭೆ<br>ಸಹಾಯಕರು | 9916048806 | | |
| 7 | JR. ASSISTANT | 1 | ದರ್ಶನ್ವಿಳ | 81230 08908 | | |
| 8 | ಬೆರಳಚ್ಚುಗಾರ | 1 | ಖಾಲಿ | | | |
| 9 | ಗ್ರೂಪ್-ಡಿ | 4 | ಖಾಲಿ | | | |